2	ಬೀದರ	ಶ್ರಮಿಕ ಭವನ ಸಿ. ಸಿ. ರಸ್ತೆಗಳು ಹಾಗೂ ಚರಂಡಿಗಳ ನಿರ್ಮಾಣ	396.00	–	–	396.00
3	ಭಾಲ್ಕಿ	ಸಿ. ಸಿ. ರಸ್ತೆಗಳ ನಿರ್ಮಾಣ	45.00	–	–	45.00
4	ಬಸವ ಕಲ್ಯಾಣ	ರಾ. ಶಿಕ್ಷಣ ಮತ್ತು ನೀರಿನ ತೊಟ್ಟಿಗಳ ನಿರ್ಮಾಣ	24.00	–	–	24.00
5	ಹುಮನಾಬಾದ	ರಸ್ತೆ ನಿರ್ಮಾಣ	38.37	–	–	38.7
6	ಔರಾದ	ಯಾವುದೇ ಪ್ರಸ್ತಾವನೆ ಇರುವುದಿಲ್ಲ				

ರಾಜ್ಯ ತೊಗರಿ ಮಂಡಳಿಯ ಕಾರ್ಯವೈಖರಿ

919 (1659); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

(ಅ) ರಾಜ್ಯ ತೊಗರಿ ಮಂಡಳಿಯ ಇದುವರೆಗಿನ ಕಾರ್ಯ ನಿರ್ವಹಣೆಯ ಕುರಿತಾದ ಸಾಧನೆಗಳು ಹಾಗೂ ಉಪಯುಕ್ತತೆಯ ಕುರಿತಾದ ವಿವರ ನೀಡುವುದು;

(ಆ) ರೈತರಿಂದ ಖರೀದಿಸಿದ ತೊಗರಿಯ ಪ್ರಮಾಣವೆಷ್ಟು; ಅವರಿಗೆ ನೀಡುತ್ತಿರುವ ಬೆಲೆ ಮತ್ತು ರೈತರುಗಳಿಗೆ ನ್ಯಾಯಬೆಲೆ ಒದಗಿಸಿಕೊಡುವಲ್ಲಿ ಅನುಸರಿಸುತ್ತಿರುವ ವಿಧಿವಿಧಾನಗಳೆನು;

(ಇ) ಸಕಾಲದಲ್ಲಿ ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಸಲು ಮಂಡಳಿಯು ಹಮ್ಮಿಕೊಂಡ ಕಾರ್ಯಕ್ರಮಗಳೇನು; ವಿಳಂಬ ತಪ್ಪಿಸಲು ಹಾಗೂ ರೈತರ ತೊಗರಿ ಬೆಳೆಯನ್ನು ಸಕಾಲಿಕವಾಗಿ ಖರೀದಿಸುವಲ್ಲಿ–ಕೈಗೊಂಡ ಕ್ರಮ

ಗಳು ಹಾಗೂ ಮಂಡಳಿಗೆ ಒದಗಿಸಿರುವ ಆರ್ಥಿಕ ಬಲದ ಕುರಿತಾದ ಮಾಹಿತಿ ಒದಗಿಸುವುದು?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

(ಅ) ರಾಜ್ಯ ತೊಗರಿ ಮಂಡಳಿಯ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:

1. ಬೆಂಬಲ ಬೆಲೆ ಯೋಜನೆಯಡಿ ಮಾರುಕಟ್ಟೆ ಮಧ್ಯಪ್ರದೇಶ ಕಾರ್ಯ ಕ್ರಮದಡಿ ತೊಗರಿಯನ್ನು ರೈತರಿಂದ ನೇರವಾಗಿ ಖರೀದಿಸುವುದು.

2. ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸುವುದು.

3. ಸಂಶೋಧನೆಗಳನ್ವಯ ತಾಂತ್ರಿಕತೆಯನ್ನು ರೈತರಿಗೆ ತಿಳಿಯಪಡಿಸುವುದು.

4. ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಸಹಕರಿಸುವುದು.

(ಆ) 1. 2013–14ನೇ ಸಾಲಿನಲ್ಲಿ ರೈತರಿಂದ ತೊಗರಿ ಖರೀದಿಸಿದ ಪ್ರಮಾಣ 2,51,012 ಕ್ವಿಂಟಾಲ್

2. 2013–14ನೇ ಸಾಲಿನಲ್ಲಿ ರೈತರಿಗೆ ನೀಡುತ್ತಿರುವ ಬೆಲೆ 5,000/– ಪ್ರತಿ ಕ್ವಿಂಟಾಲ್‌ಗೆ

3. ರೈತರಿಗೆ ಕೋಡಬೇಕಾದ ಹಣವನ್ನು NCDEX Spot Exchange Ltd. ಮುಖಾಂತರ ರೈತರ ಬ್ಯಾಂಕ್ ಖಾತೆಗೆ ನೇರವಾಗಿ Online RTGS ಮೂಲಕ ಜಮಾ ಮಾಡಲಾಗಿದೆ.

(ಇ) 1. ಪ್ರತಿ ತಾಲ್ಲೂಕಿನಲ್ಲಿ ತೊಗರಿ ಖರೀದಿ ಕೇಂದ್ರವನ್ನು ಸ್ಥಾಪಿಸಿ ಸಕಾಲ ದಲ್ಲಿ NCDEX Spot Exchange Ltd. ಮುಖಾಂತರ ತೊಗರಿ ಖರೀದಿಸಲಾಗಿದೆ.

2. ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ಆವರ್ತ ನಿಧಿ ಯಿಂದ ` 137 ಕೋಟಿ ಬಿಡುಗಡೆಯಾಗಿರುತ್ತದೆ. ಸದರಿ ಹಣವನ್ನು ರೈತರ ಖಾತೆಗೆ ಜಮಾ ಮಾಡಲಾಗಿದೆ.